## ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಾಗಲಕೋಟ

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರ ನಿರ್ಮಾಣ ಕಾಯ್ದೆ 2013ರ (ದಿನಾಂಕ:01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ರೊಂದಿಗೆ ಓದಲಾದ ಕಲಂ 11(1) ರಲ್ಲಿ ಮಾಡಿದ ಅಧಿಸೂಚನೆ**

ಕ್ರ:ಕಂಶಾ:ಎಲ್ಎಕ್ಯೂ:ಸಿಆರ್-14/2016-17 ದಿನಾಂಕ: 16 -08-2017

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಮುಧೋಳ ತಾಲ್ಲೂಕಿನ ಮದಭಾವಿ ಗ್ರಾಮದ ಹತ್ತಿರ ಇಂಗು ಕೆರೆ ನಿರ್ಮಾಣ ಕಾಮಗಾರಿಗಾಗಿ ಮುಧೋಳ ತಾಲ್ಲೂಕಿನ ಮದಭಾವಿ ಗ್ರಾಮದ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗುವದೆಂದು ಕರ್ನಾಟಕ ಸರ್ಕಾರ ಇವರಿಗೆ ಕಂಡು ಬಂದಿದೆ.

ಸದರಿ ಯೋಜನೆಗೊಳಪಡುವ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ ನಿರ್ಮಾಣ ಕಾಯ್ದೆ 2013ರ (ದಿನಾಂಕ:01.01.2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕಲಂ 11 ರ ಸೌಲಭ್ಯದ ಮೇರೆಗೆ (ಕೇಂದ್ರದ 30 ನೇ ಕಾಯ್ದೆ) ಕಲಂ 12 ರಡಿ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು ಬಾಗಲಕೋಟ ಇವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ಉಪವಿಭಾಗಾಧಿಕಾರಿಗಳು ಜಮಖಂಡಿ ಇವರಿಗೆ ನೀಡಲಾಗಿದೆ.

ಕೇಂದ್ರ ಸರ್ಕಾರದ ಹೊಸ ಕಾಯ್ದೆ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರ ಕಲಂ 6(2) ಹಾಗೂ ಕರ್ನಾಟಕ ರಾಜ್ಯ ಭೂಸ್ವಾಧೀನ ನಿಯಮಾವಳಿಗಳು 2015ರ ನಿಯಮ 3(6)(6)ರ ಅಡಿಯಲ್ಲಿ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಪರಿಸರದ ಮೇಲಿನ ಪರಿಣಾಮ ನಿರ್ಧರಣ ಅಂಶದ **(Environment Impact Assessment)** ಪ್ರಕ್ರಿಯೆಯನ್ನು ಬೇರಾವುದೇ ಕಾಯ್ದೆಗಳಡಿಯಲ್ಲಿ ಮಾಡಬೇಕಾದಲ್ಲಿ ಸಾಮಾಜಿಕ ಪರಿಣಾಮ ನಿರ್ಧರಣದ **(Social Impact Assessment)** ಅಂಶವು ಅನ್ವಯಿಸುವದಿಲ್ಲವೆಂದು ಸ್ಪಷ್ಟೀಕರಿಸಿದ್ದು, ಪ್ರಸ್ತುತ ನೀರಾವರಿ ಯೋಜನೆಯ ಭೂಸ್ವಾಧೀನತೆಗೆ ಸಾಮಾಜಿಕ ಪರಿಣಾಮ ನಿರ್ಧರಣ ಅಂಶವು ಅನ್ವಯಿಸುವದಿಲ್ಲ.

ಕೇಂದ್ರ ಸರ್ಕಾರದ ಹೊಸ " ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ಕಾಯ್ದೆಯ ಕಲಂ 3(ಎ) ಹಾಗೂ 43(ಬಿ) ರನ್ವಯ ಪುನರವಸತಿ ಮತ್ತು ಪುನರ ನಿರ್ಮಾಣ ಕಾರ್ಯ ಅನುಷ್ಠಾನಗೊಳಿಸಲು ಎಲ್ಲಾ ಜಿಲ್ಲೆಗಳಿಗೆ ಆಡಳಿತಾಧಿಕಾರಿಗಳ ಹೊಸ ಹುದ್ದೆಗಳನ್ನು ಸೃಜಿಸುವವರೆಗೆ ತಾತ್ಕಾಲಿಕವಾಗಿ, ಆಯಾ ಜಿಲ್ಲೆಯ 'ಅಪರ ಜಿಲ್ಲಾಧಿಕಾರಿ'ಗಳನ್ನು ಆಡಳಿತಾಧಿಕಾರಿ **(Administrator)** ಎಂದು ಅಧಿಕ ಪ್ರಭಾರದಲ್ಲಿರಿಸಿ ಸರ್ಕಾರವು ಅಧಿಸೂಚನೆ ಸಂಖ್ಯೆ:ಕಂಇ 56 ಭೂಸ್ವಾಬೆ 2013 ದಿನಾಂಕ:02.04.2014ರಲ್ಲಿ ಸ್ಪಷ್ಟೀಕರಿಸಿದ್ದು, ಈ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ "ಅಪರ ಜಿಲ್ಲಾಧಿಕಾರಿಗಳು" ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಾಗಲಕೋಟೆ ಇವರು ಆಡಳಿತಾಧಿಕಾರಿಯಾಗಿರುತ್ತಾರೆ.

2013 ರ ಕಾಯ್ದೆ ಕಲಂ 15(1)ರ ಮೇರೆಗೆ ಆಸಕ್ತಿ ಉಳ್ಳವರು ತಮ್ಮ ತಂಟೆ ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಗೆ ಹಾಕಲಾಗುವುದು.

ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲೀ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಯ್ದೆ 2013ರ ಕಲಂ 11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರೀ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದನ್ನು ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಉಪವಿಭಾಗಾಧಿಕಾರಿಗಳು ಜಮಖಂಡಿ ಇವರ ಕಾರ್ಯಾಲಯದಲ್ಲಿ ಭೂಮಿಗಳ ಸ್ಥೂಲ ನಕಾಶೆಯನ್ನು ಪರಿಶೀಲನೆಗಾಗಿ ಇಡಲಾಗಿದೆ.

## ಅನುಸೂಚಿ

ಜಿಲ್ಲೆ: ಬಾಗಲಕೋಟ ತಾಲೂಕು: ಮುಧೋಳ ಹೋಬಳಿ: ಮುಧೋಳ

ಗ್ರಾಮ: ಮದಭಾವಿ

ಕ್ರನಂ:ಎಲ್ಎಕ್ಯೂ:ಎಸ್ಆರ್:05/16–17

| ಕ್ರಮ ಸಂಖ್ಯೆ | ವಿವರಣೆಯೊಂದಿಗೆ ಕ್ರಮಸಂಖ್ಯೆ ಅಥವಾ ನಿವೇಶನ ಸಂಖ್ಯೆ ಅಥವಾ ಸರ್ವೆ ನಂಬರ | ಹಿಸ್ಸಾ ನಂಬರ | ಖಾತೇದಾರ/ಅನುಭವದಾರ ಅಥವಾ ಗೇಣಿದಾರ ಅಥವಾ ಹಿತಾಸಕ್ತಿ ಹೊಂದಿರುವ ಇತರ ವ್ಯಕ್ತಿಯ ಹೆಸರು | ತರಹೆ | ಚಕಬಂದಿ | | | | ಅಗತ್ಯವಾದ ವಿಸ್ತೀರ್ಣ | ಮೌಲ್ಯ ನಿರ್ಧರಣೆ ಆಕಾರ | ಶರಾ |
|---|---|---|---|---|---|---|---|---|---|---|---|
| | | | | | ಉತ್ತರ | ದಕ್ಷಿಣ | ಪೂರ್ವ | ಪಶ್ಚಿಮ | ಎ/ಗು/ಆ | ರೂ ಪೈ | |
| [redacted] | | | | | | | | | | | |
| 1 | 63 | 2ಬ | ಅಶೋಕ ಸಾಕಳಚಂದ ಓಸ್ವಾಲ | ಬಾಗಾಯತ | 65 | ರಸ್ತೆ | 64 | 54,55,56, 57 | 12–34 ಖ(1–00) | – | 1– ಕೊಳವೆಬಾವಿ |
| 2 | 64 | 1 | ಆಸ್ಕರ ರಮಜಾನಸಾಬ ಪಕಾಲಿ | ಬಾಗಾಯತ | 65 | ರಸ್ತೆ | 116 | 63 | 2–36 | – | – |
| 3 | 64 | 4 | ಲಕ್ಷ್ಮೀಬಾಯಿ ಗಂ.ಮಲ್ಲಪ್ಪ ಮುಚ್ಚಂಡಿ | ಬಾಗಾಯತ | 65 | ರಸ್ತೆ | 116 | 63 | 3–00 ಖ(0–02) | – | – |
| [redacted] | | | | | | | | | 18–30 | – | – |

(ರವೀಂದ್ರ ಕರಲಿಂಗಣ್ಣವರ)
ಉಪ-ವಿಭಾಗಾಧಿಕಾರಿಗಳು ಜಮಖಂಡಿ

PR-NO-852.

16/8

(ಪಿ.ಎ.ಮೇಘಣ್ಣವರ)
ಜಿಲ್ಲಾಧಿಕಾರಿಗಳು ಬಾಗಲಕೋಟ